Sl. No.	Name of the Distillery
24	Yezdi Distilleries, No. 140, 143, Bannimantap Layout, Mysore.
25	Bacardi Martini (D)Ltd., (Sub) Leassees of GDL) Nanjangud, Mysore District.
26	Greenfield Distilleries, Baikampady, Mangalore.
27	A.J. Distilleries, Plot No. 289 & 425, Baikampady Industrial Area, Mangalore Taluk, Dakshina Kannada.

ಟಯೋಟ ಕಿರ್ಲೋಸ್ಕರ್‌ಗೆ ವಿದ್ಯುತ್ ಸರಬರಾಜು ಮಾಡಿ ಬಿಲ್ ಮಾಡದೆ ಉಂಟಾಗಿರುವ ನಷ್ಟದ ಬಗೆ

4405 (5074) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1998–99 ರಿಂದ 2000–01ರ ವರೆಗೆ ಕರ್ನಾಟಕ ವಿದ್ಯುತ್ ಸರಬರಾಜು ನಿಗಮವು ಒಪ್ಪಂದದ ಪ್ರಕಾರ ಟಯೋಟ ಕಿರ್ಲೋಸ್ಕರ್‌ಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಿ ಸರಿಯಾಗಿ ಬಿಲ್ ಮಾಡದ ಕಾರಣ ಉಂಟಾದ ನಷ್ಟ ಎಷ್ಟು.

ಆ) ಈ ರೀತಿ ನಷ್ಟ ಉಂಟಾಗಲು ಕಾರಣರಾದ ಅಧಿಕಾರಿಗಳು ಯಾರು, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಈ ರೀತಿ ಸರಿಯಾಗಿ ಬಿಲ್ ಮಾಡದೆ ನಷ್ಟ ಉಂಟು ಮಾಡಿದ ಎಷ್ಟು ಪ್ರಕರಣಗಳಿವೆ.

ಈ) ಇಂತಹ ಪ್ರಕರಣಗಳು ಮರುಕಳಿಸದಂತೆ ಏನು ಮುಂಜಾಗೃತೆ ಕ್ರಮ ವಹಿಸಲಾಗಿದೆ.

ಶ್ರೀ ಬಸವರಾಜ ಪಾಟೀಲ್ (ಇಂಧನ ರಜ್ಯ ಸಚಿವರು)

ಅ) 1998–99 ರಿಂದ 2000–01 ರವರೆಗೆ ಬೆಂಗಳೂರು ಸಮೀಪ ಬಿಡದಿಯ ಟಯೋಟ ಕಿರ್ಲೋಸ್ಕರ್ ರವರಿಗೆ ಮಾಡಿದ ವಿದ್ಯುತ್ ಸರಬರಾಜಿಗೆ ಸರಿಯಾಗಿ ಬಿಲ್ಲುಗಳನ್ನು ನೀಡಿ ಪೂರ್ತಿ ಹಣ ವಸೂಲಿ ಮಾಡಿರುವ ಕಾರಣ ನಷ್ಟದ ಪ್ರಶ್ನೆಯು ಉದ್ಭವಿಸುವುದಿಲ್ಲ.

ಆ) ಇದು ಉದ್ಭವಿಸುವುದಿಲ್ಲ.

ಇ) ಇ) ಮತ್ತು ಈ) ಯಾವ ಪ್ರಕರಣಗಳೂ ಇಲ್ಲ.

ಇ.ಹೆಚ್.ಟಿ. ಮತ್ತು ಹೆಚ್.ಟಿ. ಬಿಲ್ಲಿಂಗ್ ವ್ಯವಸ್ಥೆಯನ್ನು ಹೆಚ್ಚು ಕಡಿಮೆ ಗಣಕೀಕರಣಗೊಳಿಸಿರುವುದರಿಂದ ಇವುಗಳಲ್ಲಿ ಸಾಮಾನ್ಯವಾಗಿ ಯಾವುದೇ ತಪ್ಪುಗಳು ಸಂಭವಿಸುವುದಿಲ್ಲ. ಅಲ್ಲದೇ, ಹೆಚ್ಚಿನ ನಿಗಾ ವಹಿಸಲಾಗುತ್ತದೆ. ಆದರೆ ಎಲ್.ಟಿ. ವರ್ಗದ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ, ಕೆಲವೊಮ್ಮೆ ಬಿಲ್ಲುಗಳಲ್ಲಿ ತಪ್ಪುಗಳು ಆಗುವ ಸಂಭವಗಳನ್ನು ತಳ್ಳಿ ಹಾಕುವಂತಿಲ್ಲ. ಆದರೆ ಅಂತಹ ತಪ್ಪುಗಳನ್ನು ಆಂತರಿಕ ಲೆಕ್ಕ ಪರಿಶೋಧನೆ ಸಿಬ್ಬಂದಿಗಳು ನಡೆಸುವ ಲೆಕ್ಕ ಪರಿಶೋಧನೆಯ ಮೂಲಕ ಪತ್ತೆ ಹಚ್ಚಿ ಆಡಿಟ್ ಷಾರ್ಟ್‌ಕ್ಲೈಮ್ಸ್ ಮೂಲಕ ಸಂಬಂಧಿಸಿದ ಗ್ರಾಹಕರಿಂದ ವಸೂಲು ಮಾಡಲಾಗುತ್ತದೆ. ಆದಾಗ್ಯೂ. ಬಿಲ್ಲಿಂಗ್ ವ್ಯವಸ್ಥೆಯಲ್ಲಿ ಸುಧಾರಣೆ ಮಾಡುವ

ಸಲುವಾಗಿ, ಬಿಲ್ಲಿಂಗ್ ವ್ಯವಸ್ಥೆಯನ್ನು ಗಣಕೀಕರಣಗೊಳಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು. ವಿದ್ಯುತ್ ವಿತರಣಾ ಕಂಪನಿಗಳ ಹಲವಾರು ಉಪ–ವಿಭಾಗಗಳಲ್ಲಿ ಬಿಲ್ಲಿಂಗ್ ವ್ಯವಸ್ಥೆಯನ್ನು ಈಗಾಗಲೇ ಗಣಕೀಕರಣಗೊಳಿಸಲಾಗಿದೆ. ಇದನ್ನು ಇತರ ಉಪ–ವಿಭಾಗಗಳಿಗೆ ಹಂತ ಹಂತವಾಗಿ ವಿಸ್ತರಿಸಲಾಗುತ್ತದೆ.

ಅಧೀನ ಶಾಸನ ರಚನಾ ಸಮಿತಿಗೆ ಆದೇಶ, ಆದ್ಯಾದೇಶಗಳನ್ನು ತಡವಾಗಿ ಸಲ್ಲಿಸುತ್ತಿರುವುದರ ಬಗ್ಗೆ

4406 (5075) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಧೀನ ಶಾಸನ ರಚನಾ ಸಮಿತಿಗೆ ಸರ್ಕಾರಿ ಆದೇಶ, ನಿಯಮ ಮತ್ತು ಅಧ್ಯಾದೇಶಗಳನ್ನು ಪರಿಶೀಲನೆ ಸಲುವಾಗಿ ಬಹಳಷ್ಟು ತಡವಾಗಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೌದಾದರೆ, ಈ ರೀತಿ ತಡ ಆಗದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ತಡವಾಗಿ ಸಮಿತಿಯ ಮುಂದೆ ಮಂಡಿಸಲು ಕಾರಣರಾದ ಅಧಿಕಾರಿಗಳು ಯಾರು; ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ವಿವಿಧ ಅಧಿನಿಯಮಗಳಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆ ಮತ್ತು ಪ್ರತಿಯೊಂದು ನಿಯಮವನ್ನು ಅದನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ವಿವಿಧ ಅಧಿನಿಯಮಗಳಲ್ಲಿ ಉಪಬಂಧಗಳನ್ನು ಕಲ್ಪಿಸಲಾಗಿದೆ. ಈ ರೀತಿ ಹೊರಡಿಸಿದ ಅಧಿಸೂಚನೆ ಮತ್ತು ನಿಯಮಗಳನ್ನು ಆಯಾ ಇಲಾಖೆಗಳೇ ವಿಧಾನಮಂಡಲದ ಸಚಿವಾಲಯಕ್ಕೆ ಕಳುಹಿಸುತ್ತಿರುವುದರಿಂದ ಈ ಬಗ್ಗೆ ಆಗುತ್ತಿರುವ ವಿಳಂಬವು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸಕಾರಣವಿಲ್ಲದೆ ವಿಳಂಬ ಮಾಡಿದ ಅಧಿಕಾರಿಗಳ ಬಗ್ಗೆ ಈ ಇಲಾಖೆಯಲ್ಲಿ ಮಾಹಿತಿ ಇರುವುದಿಲ್ಲ. ಯಾವುದೇ ವಿಳಂಬದ ಪ್ರಕರಣಗಳನ್ನು ವಿಧಾನಮಂಡಲದ ಸಚಿವಾಲಯವು ಈ ಇಲಾಖೆಯ ಗಮನಕ್ಕೆ ತಂದಲ್ಲಿ ಸೂಕ್ತ ಕ್ರಮ ಜರುಗಿಸುವಂತೆ ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ಸೂಚಿಸಲಾಗುವುದು.

ಚಾಮರಾಜನಗರ ತಾಲ್ಲೂಕಿನಲ್ಲಿ ನಾಗರೀಕ ಸೌಲಭ್ಯ ದೊರೆಯದಿರುವ ಬಗ್ಗೆ

4407 (5273) : ಶ್ರೀ ಗುರುಸ್ವಾಮಿ ಪಿ. (ಚಾಮರಾಜನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಮೂಡಲ ಮೋಳೆ, ಜಾಲಹಳ್ಳಿ ಹುಡಿ (ಕುರುಬರ ಬೀದಿ) ಗ್ರಾಮಗಳು ಸುಮಾರು 2 ಸಾವಿರ ಜನ ಸಂಖ್ಯೆ ಹೊಂದಿದ್ದು, ನಗರಸಭೆ ಅಥವಾ ಗ್ರಾಮ ಪಂಚಾಯ್ತಿ